# ಭಾರತದಲ್ಲಿ ಸಮನ್ವಯ ಶಿಕ್ಷಣ
## ಪರಿಕಲ್ಪನೆಯಿಂದ ವಾಸ್ತವದೆಡೆಗೆ

ಡಾ. ಉಮಾ ತುಲಿ

ಒಂದು ದೇಶದ ಅತ್ಯಮೂಲ್ಯ ಆಸ್ತಿ ಎಂದರೆ ಮಕ್ಕಳು. ಪ್ರತಿಯೊಂದು ಮಗುವೂ ಸಂತೋಷಭರಿತ ಹಾಗೂ ರಚನಾತ್ಮಕ ಜೀವನ ನಡೆಸುವಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿ. ಇದಕ್ಕಾಗಿ ಅವರ ಸಾಮರ್ಥ್ಯವನ್ನು ಗರಿಷ್ಠ ಮಟ್ಟಕ್ಕೆ ಬೆಳೆಸುವುದು ಅತ್ಯಗತ್ಯ. ಬದುಕಿನ ಸವಾಲುಗಳನ್ನು ಎದುರಿಸಲು ಮಕ್ಕಳನ್ನು ಸದೃಢರನ್ನಾಗಿಸಲು ಹಾಗೂ ಸಜ್ಜುಗೊಳಿಸಲು, ಆ ಮೂಲಕ ಅವರ ಆಮೂಲಾಗ್ರ ಬೆಳವಣಿಗೆಗೆ ನೆರವಾಗಲು ಶಿಕ್ಷಣ ಒಂದು ಮಹತ್ವದ ಹಾಗೂ ಅತ್ಯವಶ್ಯಕವಾದ ಪಾತ್ರ ವಹಿಸುತ್ತದೆ.

ಹೆಚ್ಚುವರಿ ಅಗತ್ಯ ಬೇಕಾದವರು ಸೇರಿದಂತೆ ಎಲ್ಲ ಮಕ್ಕಳ ಹಕ್ಕಿಗಾಗಿ, ಅದರಲ್ಲೂ ಸಮಾಜದ ದುರ್ಬಲ ಹಾಗೂ ಅಂಚಿನಲ್ಲಿರುವ ವರ್ಗದವರಿಗಾಗಿ, ಅನೇಕ ವರ್ಷಗಳಿಂದ ಜಾಗತಿಕವಾಗಿ ಹಲವಾರು ಕಾರ್ಯಕ್ರಮಗಳು ಹಾಗೂ ಯೋಜನೆಗಳನ್ನು ಜಾರಿಗೊಳಿಸಲಾಗುತ್ತಿದೆ. ವೈಕಲ್ಯಕ್ಕೆ ಸಂಬಂಧಿಸಿದ ಪೂರ್ವಾಗ್ರಹಗಳಿಂದ ಹೊರಬರಲು ಹಾಗೂ ತಮ್ಮೊಳಗಿರುವ ಘನತೆ, ಶಕ್ತಿ ಹಾಗೂ ಸಾಮರ್ಥ್ಯಗಳಿಂದ ಸಮಾಜದಲ್ಲಿ ಒಂದು ಯುಕ್ತ ಸ್ಥಾನದ ಹಕ್ಕಿನ ಅಗತ್ಯತೆಯನ್ನು ಎತ್ತಿಹಿಡಿಯುವ ಪ್ರಯತ್ನಗಳು ಹಲವಾರು ವರ್ಷಗಳಿಂದ ನಡೆಯುತ್ತಲೇ ಇದ್ದರೂ, ವೈಕಲ್ಯ ಹೊಂದಿರುವ ಬಹಳಷ್ಟು ಜನ ಇನ್ನೂ ಬಹಿಷ್ಕಾರ ಹಾಗೂ ತಾರತಮ್ಯವನ್ನು ಎದುರಿಸುತ್ತಲೇ ಇದ್ದಾರೆ. ಅವರಿಗೆ



ಪ್ರತ್ಯೇಕವಾಗಿಯೇ ಶಿಕ್ಷಣವನ್ನು ನೀಡಲಾಗುತ್ತಿದೆ ಅಥವಾ ಅವರ ಸಾಮರ್ಥ್ಯಗಳನ್ನು ಗುರುತಿಸದೆಯೇ ಬಹಳ ಕಳಪೆ ಹಾಗೂ ನಿಷ್ಪ್ರಯೋಜಕವಾದ ರೀತಿಯಲ್ಲಿ ಇತರರೊಂದಿಗೆ ಸೇರಿಸಲಾಗುತ್ತಿದೆ.

**ತಳಮಟ್ಟದ ವಾಸ್ತವಗಳು**

2011ರ ಜನಗಣತಿಯ ಪ್ರಕಾರ, ಭಾರತದ 120 ಕೋಟಿ ಜನರಲ್ಲಿ ಶೇಕಡಾ 2.21ರಷ್ಟು ಜನರು ಅಂದರೆ 2.68 ಕೋಟಿ ಜನರು ಒಂದಲ್ಲಾ ಒಂದು ನ್ಯೂನತೆಯನ್ನು ಹೊಂದಿದ್ದಾರೆ. ಅವರುಗಳಲ್ಲಿ 5ರಿಂದ 19 ವರ್ಷ ವಯಸ್ಸಿನೊಳಗಿನ 66 ಲಕ್ಷ ಮಕ್ಕಳಿದ್ದಾರೆ. 2011ರಲ್ಲಿ ವಿಶ್ವ ಆರೋಗ್ಯ ಸಂಸ್ಥೆ (World Health Organisation) ಹಾಗೂ ವಿಶ್ವಬ್ಯಾಂಕ್ (World Bank) ಸಹಯೋಗದಲ್ಲಿ ನ್ಯೂನತೆಯ ಕುರಿತ ವಿಶ್ವ ವರದಿಯು (World Report) ಅಂದಾಜಿಸಿದ ಪ್ರಕಾರ, ಜಾಗತಿಕ ಜನಸಂಖ್ಯೆಯ ಹದಿನೈದು ಪ್ರತಿಶತ ಜನರು ನ್ಯೂನತೆಯನ್ನು ಹೊಂದಿದ್ದಾರೆ.

ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಪ್ರಗತಿ ಸಾಧಿಸಿದ್ದರೂ, 5ರಿಂದ 19 ವರ್ಷದೊಳಗಿನ ವಿಶೇಷ ಅಗತ್ಯ ಬೇಕಾದ ಮಕ್ಕಳ ಶಿಕ್ಷಣದ ಅಗತ್ಯಗಳನ್ನು ಒದಗಿಸುವಲ್ಲಿ ಭಾರತವು ಬಹಳಷ್ಟು ಸವಾಲುಗಳನ್ನು ಎದುರಿಸುತ್ತಿದೆ. ವಿಶೇಷ ಅಗತ್ಯ ಬೇಕಾದ ಹೆಣ್ಣುಮಕ್ಕಳಲ್ಲಿ ಇಪ್ಪತ್ತೆಂಟು ಪ್ರತಿ ಶತಮಕ್ಕಳು ಎಂದೂ ಯಾವುದೇ ಶೈಕ್ಷಣಿಕ ಸಂಸ್ಥೆಗಳಿಗೆ ಹೋಗಿಲ್ಲ. ಇಪ್ಪತ್ತಾರು ಪ್ರತಿಶತ ಹೊಂದಿರುವ ಗಂಡು ಮಕ್ಕಳ ಸಂಖ್ಯೆ ಸ್ವಲ್ಪಮಟ್ಟಿಗೆ ಉತ್ತಮವಾಗಿದೆ. ವಿಶೇಷ ಅಗತ್ಯವುಳ್ಳ ಪುರುಷರಲ್ಲಿ ಹದಿನಾರು ಪ್ರತಿಶತ ಹಾಗೂ ವಿಶೇಷ ಅಗತ್ಯವುಳ್ಳ ಮಹಿಳೆಯರಲ್ಲಿ ಒಂಭತ್ತು ಪ್ರತಿಶತದಷ್ಟು ಜನರಷ್ಟೇ ಮೆಟ್ರಿಕ್ಯುಲೇಷನ್/ಪ್ರೌಢ ಶಿಕ್ಷಣವನ್ನು ಪಡೆದಿದ್ದಾರೆ. ವಿಶೇಷ ಅಗತ್ಯವುಳ್ಳ ಪುರುಷರಲ್ಲಿ ಕೇವಲ ಒಂಭತ್ತು ಪ್ರತಿಶತ ಮತ್ತು ಮಹಿಳೆಯರು ಮೂರು ಪ್ರತಿಶತ ಪದವೀಧರರಾಗಿರುವುದು ಆಶ್ಚರ್ಯವೇನಲ್ಲ. ಭಾರತದಲ್ಲಿ ನೀತಿ ಹಾಗೂ ಶಾಸಕಾಂಗ ಚೌಕಟ್ಟುಶಿಕ್ಷಣ ಎಲ್ಲ ಮಕ್ಕಳ ಹಕ್ಕು ಎಂಬುದನ್ನು ಗಮನದಲ್ಲಿಟ್ಟು-ಕೊಂಡು ಭಾರತದಲ್ಲಿ ಅನೇಕ ವರ್ಷಗಳಿಂದ ಹಲವಾರು ಕಾರ್ಯಕ್ರಮಗಳು ಹಾಗೂ ಯೋಜನೆಗಳನ್ನು ರೂಪಿಸಲಾಗಿದೆ. ಕೆಲವು ಮುಖ್ಯ ಶಾಸನಬದ್ಧ ಉಪಬಂಧಗಳನ್ನು (Legislative provisions) ಕೆಳಗೆ ಕೊಡಲಾಗಿದೆ:

- ಸಾಂವಿಧಾನಿಕ ಉಪಬಂಧಗಳು: ವಿಧಿ 21ಎ, ವಿಧಿ 45 ಹಾಗೂ ವಿಧಿ 51ಎ(ಕೆ)
- ಮಾನಸಿಕ ಆರೋಗ್ಯ ಕಾಯ್ದೆ 1987, (The Mental Healthcare Act, 1987), 2017ರಲ್ಲಿ ಪರಿಷ್ಕೃತ 1995ರ ವಿಶೇಷ ಅಗತ್ಯವುಳ್ಳ ವ್ಯಕ್ತಿಗಳ (ಸಮಾನ ಅವಕಾಶಗಳು, ಹಕ್ಕುಗಳ ರಕ್ಷಣೆ ಮತ್ತು ಸಂಪೂರ್ಣ ಭಾಗೀದಾರಿಕೆ) ಕಾಯ್ದೆ, (Persons with Disabilities Act, 1995), 2016ರಲ್ಲಿ ಪರಿಷ್ಕೃತ (ವಿಶೇಷ ಸಾಮರ್ಥ್ಯದ ವ್ಯಕ್ತಿಗಳ ಹಕ್ಕುಗಳ ಕಾಯ್ದೆ- The Rights of Persons with Disabilities Act))
- 1992ರ ಪುನರ್ವಸತಿ ಕೌನ್ಸಿಲ್ ಆಫ್ ಇಂಡಿಯಾ ಕಾಯ್ದೆ, (Rehabilitation Council of India Act,1992) 2000ರಲ್ಲಿ ಕಾಯ್ದೆಗೆ ತಿದ್ದುಪಡಿ ತರಲಾಗಿದೆ.
- 2009ರಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ, (Right to Education Act, 2009) 2019ರಲ್ಲಿ ಪರಿಷ್ಕೃತ
- 1999ರ ರಾಷ್ಟ್ರೀಯ ಟ್ರಸ್ಟ್ ಕಾಯ್ದೆ (National Trust Act, 1999)

ಅಗತ್ಯ ಮೂಲಸೌಕರ್ಯಗಳ ಕೊರತೆ, ಅಳವಡಿಸಿ-ಕೊಂಡಿರುವ ಬೋಧನಾ-ಕಲಿಕಾ ಸಾಮಗ್ರಿಗಳು ಹಾಗೂ ಇನ್ನಿತರ ಹಲವು

ಅಂಶಗಳಿಂದಾಗಿ ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ (ಆರ್‌ಟಿಇ)ಯ ನಿರೀಕ್ಷಿತ ಉದ್ದೇಶಗಳು ಸಂಪೂರ್ಣವಾಗಿ ಈಡೇರಿಲ್ಲ.

**ರಾಷ್ಟ್ರೀಯ ನೀತಿಗಳು**

ದೈಹಿಕ ಅಥವಾ ಬೌದ್ಧಿಕ ಸವಾಲುಗಳನ್ನು ಎದುರಿಸುತ್ತಿರುವ ಮಕ್ಕಳನ್ನು ಸಾಮಾನ್ಯ ವರ್ಗದವರೊಂದಿಗೆ ಸಮಾನರಾಗಿ ಕಂಡು ಅವರೊಡನೆ ಒಂದಾಗಿಸಿದಾಗ ಮಕ್ಕಳನ್ನು ಸಹಜ ಬೆಳವಣಿಗೆಗೆ ತಯಾರು ಮಾಡಿದಂತಾಗುತ್ತದೆ ಎಂಬ ಅನುಮೋದನೆಯನ್ನು ರಾಷ್ಟ್ರೀಯ ಶಿಕ್ಷಣ ನೀತಿ, 1986 (National Policy on Education -NPE) ಹಾಗೂ ಎನ್‌ಪಿಇಯಿಂದ ಹೊರಹೊಮ್ಮಿದ 1992ರ ಕ್ರಿಯಾ ಯೋಜನೆಯು (Programme of Action 1992) ಪುನರುಚ್ಚರಿಸುತ್ತದೆ. ಸಂಯೋಜಿತ ಶಿಕ್ಷಣ ಕಾರ್ಯಕ್ರಮಗಳ ವಿಸ್ತರಣೆಯ ಅಗತ್ಯದ ಕುರಿತು ಎನ್‌ಪಿಇ ಒತ್ತಿಹೇಳಿದೆ. ಇತ್ತೀಚೆಗೆ ಆರಂಭಿಸಲಾಗಿರುವ ನೀತಿಗಳು ಹೀಗಿವೆ:

- ವಿಶೇಷ ಅಗತ್ಯ ಬೇಕಾದ ಮಕ್ಕಳು ಮತ್ತು ಯುವ ಜನರ ಒಳಗೊಳ್ಳುವಿಕೆಗಾಗಿ ರಾಷ್ಟ್ರೀಯ ಕ್ರಿಯಾ ಯೋಜನೆ, 2005 (The National Action Plan for Inclusion of children and youth with disabilities, 2005)
- ವಿಶೇಷ ಅಗತ್ಯವುಳ್ಳ ವ್ಯಕ್ತಿಗಳ ರಾಷ್ಟ್ರೀಯ ನೀತಿ, 2006 (National Policy for Persons with Disabilities, 2006)
- ರಾಷ್ಟ್ರೀಯ ಮಕ್ಕಳ ಕ್ರಿಯಾ ಯೋಜನೆ, 2016 (The National Plan of Action for children, 2016)
- ರಾಷ್ಟ್ರೀಯ ಕರಡು ಶಿಕ್ಷಣ ನೀತಿ, 2019 (The Draft National Policy on Education, 2019)


> ಸಮನ್ವಯ ಶಿಕ್ಷಣದ ಸಮಗ್ರ ವಿಧಾನಗಳ ಅನುಷ್ಠಾನಕ್ಕೆ 2019ರ ರಾಷ್ಟ್ರೀಯ ಕರಡು ಶಿಕ್ಷಣ ನೀತಿಯು (Draft National Education Policy 2019) ಸಾಕಷ್ಟು ಪ್ರಾಮುಖ್ಯತೆಯನ್ನು ಕೊಟ್ಟಿಲ್ಲ.

**ಸಮನ್ವಯ ಶಿಕ್ಷಣ**

ವಿಶೇಷ ಅಗತ್ಯ ಬೇಕಾದ ಮಕ್ಕಳೆಡೆಗಿನ ಅನುಕಂಪ ಹಾಗೂ ಸಹಾನುಭೂತಿಯುಕ್ತ ದೃಷ್ಟಿಕೋನವು ಬದಲಾವಣೆಯಾಗಿ, ಬೆಂಬಲ ಮತ್ತು ಅವಕಾಶಗಳನ್ನು ಒದಗಿಸುವುದು ಹಾಗೂ ಹಕ್ಕು ಆಧಾರಿತ ಮಾರ್ಗ ಸೂಚಿಸುವುದು ಸಮನ್ವಯ ಶಿಕ್ಷಣದ ಪರಿಕಲ್ಪನೆಯ ಹುಟ್ಟಿಗೆ ಕಾರಣವಾಯಿತು. ಇದು ಒಂದು ಶಿಕ್ಷಣ ವ್ಯವಸ್ಥೆಯಾಗಿದ್ದು, ಇಲ್ಲಿ ವೈಕಲ್ಯ ಇರುವ ಹಾಗೂ ಇಲ್ಲದಿರುವ ವಿದ್ಯಾರ್ಥಿಗಳು ಒಟ್ಟಿಗೆ ಕಲಿಯುತ್ತಾರೆ. ಇದರಲ್ಲಿ ವಿಭಿನ್ನ ರೀತಿಯ ವಿದ್ಯಾರ್ಥಿಗಳ ಕಲಿಕೆಯ ಅಗತ್ಯಕ್ಕೆ ಅನುಗುಣವಾಗಿ ಬೋಧನೆಯ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲಾಗುತ್ತದೆ. ಇದು ಎಲ್ಲ ಮಕ್ಕಳಿಗೂ ಅಂದರೆ – ಹುಡುಗರು, ಹುಡುಗಿಯರು, ವೈಕಲ್ಯ ಉಳ್ಳವರು ಹಾಗೂ ಇಲ್ಲದೆ ಇರುವವರು ಸಮಾಜದ ಅಂಚಿನಲ್ಲಿರುವ ಹಾಗೂ ಕನಿಷ್ಠ ಸವಲತ್ತುಗಳನ್ನು ಹೊಂದಿರುವವರಿಗೂ ಶಾಲೆಗಳು ಮತ್ತು ಕಲಿಕಾ ಕೇಂದ್ರಗಳು ಲಭ್ಯವಾಗುವ ಒಂದು ಪ್ರಕ್ರಿಯೆಯಾಗಿದೆ.

**ಶಿಕ್ಷಣದ ಪ್ರಕಾರಗಳು**


ಮಗು–ಕೇಂದ್ರಿತ, ಅಗತ್ಯ ಆಧಾರಿತ ಶಿಕ್ಷಣ ಹಾಗೂ ನಿರಂತರ ಕಲಿಕೆ ಎಂಬ ಪರಿಕಲ್ಪನೆಗಳು ಹೆಚ್ಚುವರಿ ಅಗತ್ಯವಿರುವ ಮಕ್ಕಳಿಗೆ ವಿವಿಧ ರೀತಿಯ ಶಾಲೆಗಳನ್ನು ಆಯ್ಕೆ ಮಾಡಿಕೊಳ್ಳಲು ಕಾರಣವಾಗಿದೆ. ಇವುಗಳನ್ನು ಈ ರೀತಿಯ ಗುಂಪುಗಳಾಗಿ ವಿಂಗಡಿಸಬಹುದು:



ಮೊದಲ ನಾಲ್ಕು ಆಯ್ಕೆಗಳು ಔಪಚಾರಿಕವಾಗಿವೆ ಹಾಗೂ ಸೂಕ್ತ ಮೂಲಸೌಕರ್ಯ ಹಾಗೂ ಸಂಪನ್ಮೂಲಗಳುಳ್ಳ ಉತ್ತಮ ಸ್ಥಳಗಳನ್ನು ಹೊಂದಿವೆ. ಇಲ್ಲಿ ಮುಖಾಮುಖಿ ಪದ್ಧತಿಯಲ್ಲಿ ಶಿಕ್ಷಣವನ್ನು ಪಡೆಯಲಾಗುತ್ತದೆ. ಇದರೊಡನೆ ನಿಗದಿತ ಸಮಯದಲ್ಲಿ ಉತ್ತಮವಾಗಿ ರೂಪಿಸಿದ ಪಠ್ಯವನ್ನು ಪೂರ್ಣಗೊಳಿಸಲಾಗುತ್ತದೆ. ಸಮಗ್ರ ಮೌಲ್ಯಮಾಪನದ ಫಲಿತಾಂಶಗಳು ಮುಂದಿನ ತರಗತಿಗೆ ಬಡ್ತಿ ಹೊಂದುವುದರ ಸೂಚನೆಯಾಗಿ ಕಾರ್ಯನಿರ್ವಹಿಸುತ್ತವೆ. ಸಂಯೋಜಿತ ರಚನೆಯಲ್ಲಿ ಮಗು ತನ್ನನ್ನು ತಾನು ಈ ವ್ಯವಸ್ಥೆಯಲ್ಲಿ ಹೊಂದಿಸಿಕೊಳ್ಳುವ ಜವಾಬ್ದಾರಿಯನ್ನು ಹೊಂದಿರುತ್ತಾನೆ/ಳೆ. ಒಂದು ಹಂತದವರೆಗೂ ಸಾಮಾಜಿಕ, ಸಾಂಸ್ಕೃತಿಕ ಅಥವಾ ಕ್ರೀಡಾ ಚಟುವಟಿಕೆಗಳಲ್ಲಿ ಹಾಗೂ ಶೈಕ್ಷಣಿಕವಾಗಿ ನಿಯಮಿತ ಪಠ್ಯಕ್ರಮಗಳಲ್ಲಿರುವ ವಿಷಯಕ್ಕೆ ಸಂಬಂಧಿಸಿದಂತೆ ಮಾತ್ರ ಮಗು ಒಳಗೊಂಡಿರುತ್ತದೆ. ವೈದ್ಯಕೀಯ ನೆರವು ಅಥವಾ ವಿಶೇಷ ಶಿಕ್ಷಣ ಅಥವಾ ಪರಿಹಾರ ಶಿಕ್ಷಣದಂತಹ ಇನ್ನಿತರ ಬೆಂಬಲದ ಮೂಲಕ ನಿಯತವಾದ ವ್ಯವಸ್ಥೆಯಲ್ಲಿ ಹೊಂದಿಕೊಳ್ಳಬಲ್ಲ ಅಲ್ಪ ಪ್ರಮಾಣದ ವೈಕಲ್ಯವಿರುವ ಮಕ್ಕಳನ್ನು ಒಳಗೊಳ್ಳಲಾಗುತ್ತದೆ. ಈ ಒಳಗೊಳ್ಳುವಿಕೆಯು ದೌರ್ಬಲ್ಯದ ನಮೂನೆ ಹಾಗೂ ತೀವ್ರತೆಯ ಆಧಾರದ ಮೇಲೆ ಒಂದೋ ಸಾಮಾಜಿಕ ಚಟುವಟಿಕೆಗಳಲ್ಲಿ ಅಥವಾ ಪಠ್ಯಕ್ರಮದ ಕೆಲವು ಭಾಗಗಳಲ್ಲಿ ಮಾತ್ರ ಆಗುತ್ತದೆ. ಮುಕ್ತ ಶಾಲೆಗಳು (Open schooling) ಅಗತ್ಯ ಆಧಾರಿತ ಶಿಕ್ಷಣ, ಎಲ್ಲಾ ಹಂತಗಳಲ್ಲೂ ವಿಭಿನ್ನ ವಿಷಯಗಳ ಆಯ್ಕೆ, ಮಗುವಿನ ಸಾಮರ್ಥ್ಯದ ಅನುಸಾರ ಗತಿ ಆಧಾರಿತ ಕಲಿಕೆ ಹಾಗೂ ಅವರ ತರಗತಿಯ ಮೌಲ್ಯ-ಮಾಪನಗಳನ್ನು ಸಂಪೂರ್ಣಗೊಳಿಸುವುದಕ್ಕೆ ವಿವಿಧ ಆಯ್ಕೆಗಳನ್ನು ಒದಗಿಸುತ್ತದೆ. ವಿಶೇಷ ಅಗತ್ಯವುಳ್ಳ ವ್ಯಕ್ತಿಗಳ ಹಕ್ಕುಕಾಯ್ದೆ, 2016ರ ಅಡಿ (Rights of Persons with Disabilities Act, 2016) ಮಾನ್ಯತೆ ಪಡೆದಿರುವ ಗೃಹಾಧಾರಿತ ಶಿಕ್ಷಣವು (Home-based education-HBE) (ಎಚ್‌ಬಿಇ) ತೀವ್ರತರವಾದ ಬೌದ್ಧಿಕ/ದೈಹಿಕ ವೈಕಲ್ಯವನ್ನು ಹೊಂದಿರುವ ಮಕ್ಕಳಿಗೆ ಸ್ವತಂತ್ರವಾದ ಜೀವನ ಕೌಶಲ್ಯಗಳನ್ನು ಹೊಂದುವುದಕ್ಕೆ ಹಾಗೂ ಶಾಲಾ ವಿಚಾರ ಹಾಗೂ ಅವರ ಜೀವನ ನಿರ್ವಹಣೆಗೆ ಸಹಾಯ ಒದಗಿಸುವ ಗುರಿಯನ್ನು ಹೊಂದಿದೆ. ಎಚ್‌ಬಿಇಯನ್ನು ಆಯ್ಕೆ ಮಾಡಿಕೊಂಡಿರುವ ಹಲವು ಮಕ್ಕಳು ವಿವಿಧ ಬಗೆಯ ವೈಕಲ್ಯಗಳು, ತೀವ್ರತರವಾದ ಅರಿವಿನ ಸವಾಲುಗಳು (Cognitive challenges), ಸೆರೆಬ್ರಲ್ ಪಾಲ್ಸಿ (Cerebral palsy) ಹಾಗೂ ಆಟಿಸಂ ಸ್ಪೆಕ್ಟ್ರಮ್ ಡಿಸ್‌ಆರ್ಡರ್ (Autism Spectrum Disorder) ಅನ್ನು ಹೊಂದಿದವರಾಗಿದ್ದಾರೆ.

**ಸಮನ್ವಯ ಶಿಕ್ಷಣದ ಅಂಶಗಳು**

ನಿಜವಾದ ಅರ್ಥದಲ್ಲಿ ಸಮನ್ವಯ ಶಿಕ್ಷಣವನ್ನು ಅನುಷ್ಠಾನ-ಗೊಳಿಸಲು ಅಗತ್ಯವಾಗಿ ಬೇಕಾದ ಅಂಶಗಳು:



**ಶಿಕ್ಷಕರ ತರಬೇತಿ** | **ಬೋಧನಾ ಸಾಮಗ್ರಿ** | **ತಡೆ ರಹಿತ ವಾತಾವರಣ** | **ಸಮಾನ ಅವಕಾಶಗಳು** | **ಸಂಪೂರ್ಣ ಭಾಗವಹಿಸುವಿಕೆ** | **ಪೂರಕ ಪೋಷಕರ ಸೇವೆಗಳು** | **ತೊಡಗಿಸಿ ಕೊಳ್ಳುವಿಕೆ**

**ಗಮ್ಯವಿರದ ಒಂದು ಪಯಣ...**

ಬದಲಾವಣೆಯನ್ನು ತರುವಲ್ಲಿ ಪೋಷಕರ ಹಾಗೂ ಸಮುದಾಯದವರ ಒಳಗೊಳ್ಳುವಿಕೆ ಅಮೂಲ್ಯವಾದದ್ದು ಹಾಗೂ ಅದನ್ನು ಮುಂದುವರೆಸಿ-ಕೊಂಡು ಹೋಗಲು ಎಲ್ಲರನ್ನೂ ಒಟ್ಟುಗೂಡಿಸಿ ಪ್ರೋತ್ಸಾಹ ನೀಡುವುದು ಅವಶ್ಯಕ. ಪೋಷಕರು / ಸಮುದಾಯದ ಸದಸ್ಯರು ಮಗುವನ್ನು ಸ್ವೀಕರಿಸುವ ರೀತಿ ಮಗುವಿನ ವ್ಯಕ್ತಿತ್ವದ ಮೇಲೆ ಪ್ರಭಾವ ಬೀರುತ್ತದೆ ಹಾಗೂ ಅವನ/ಅವಳ ಬಗ್ಗೆ ಇತರೆ ಬಳಗದವರ / ಸಮುದಾಯದ ಸದಸ್ಯರ ಅಭಿಪ್ರಾಯ ಮತ್ತು ವರ್ತನೆಯನ್ನು ನಿರ್ಧರಿಸುತ್ತದೆ. ಇವೆಲ್ಲವೂ ಪ್ರತ್ಯೇಕ ಶಿಕ್ಷಣಕ್ಕಾಗಿ ಅಲ್ಪಾವಧಿ ಹಾಗೂ ದೀರ್ಘಾವಧಿ ಗುರಿಗಳನ್ನು ನಿರ್ಧರಿಸುವಲ್ಲಿಮಹತ್ವದ ಪಾತ್ರವನ್ನು ವಹಿಸುತ್ತವೆ.




ಸುಲಭವಾಗಿ ಏರಬಹುದಾದ ಬಸ್

**ಸಮಾನ ಅವಕಾಶಗಳು ಹಾಗೂ ಸಂಪೂರ್ಣ ಭಾಗವಹಿಸುವಿಕೆ**

ಹೆಚ್ಚಿನ ಅಗತ್ಯವಿರುವ ಮಕ್ಕಳಿಗೆ ಸಮಾನ ಅವಕಾಶಗಳು ಹಾಗೂ ಸಂಪೂರ್ಣ ಭಾಗವಹಿಸುವಿಕೆಯನ್ನು ಖಾತ್ರಿಪಡಿಸುವ ತತ್ತ್ವದ ಮೇಲೆ



ಸ್ಪರ್ಶಕ್ಕೆ ಸಿಗುವ ಮಾರ್ಗ

ಸಮನ್ವಯ ಶಿಕ್ಷಣವು ಆಧರಿಸಿದೆ. ವಿಭಿನ್ನ ಅಗತ್ಯಗಳನ್ನು ಹೊಂದಿರುವ ಮಕ್ಕಳಿಗೆ ಶೈಕ್ಷಣಿಕ ಹಾಗೂ ಶೈಕ್ಷಣಿಕವಲ್ಲದ ಚಟುವಟಿಕೆಗಳನ್ನು ಒದಗಿಸಲು ಶಾಲಾಸಂಸ್ಕೃತಿ, ನೀತಿ ಹಾಗೂ ವ್ಯವಹಾರಗಳನ್ನು ಬಹಳ ಬದ್ಧತೆಯಿಂದ ಪುನರ್‌ರಚಿಸುವುದು ಶಾಲಾ ಆಡಳಿತದ ಜವಾಬ್ದಾರಿಯಾಗಿರುತ್ತದೆ.

**ಅಡೆತಡೆರಹಿತ ಪರಿಸರ**

ಶಾಲಾ ಕಟ್ಟಡದಲ್ಲಿನ ಎಲ್ಲ ಜಾಗಗಳಿಗೆ ಹಾಗೂ ತರಗತಿಗಳಿಗೆ ಸುಲಭವಾಗಿ ಹೋಗಲು ಅನುವು ಮಾಡಿಕೊಡುವುದೇ ಸಮನ್ವಯದ ಕಡೆಗೆ ಮೊದಲ ಹೆಜ್ಜೆ. ಆನಂತರ ಬರುವುದೇ ಅನಿರ್ಬಂಧಿತ ಬೋಧನಾ–ಕಲಿಕಾ ವಾತಾವರಣ.

**ಪೂರಕ ಸೇವೆಗಳು**

ಮಕ್ಕಳ ಎಲ್ಲ ಶೈಕ್ಷಣಿಕ ಅಗತ್ಯಗಳನ್ನು ಪೂರೈಸಲು ಸಾಧ್ಯವಾದಷ್ಟು ಶಾಲೆಗಳಲ್ಲಿಯೇ ಸಮಗ್ರವಾದ ಪೂರಕ ಸೇವೆಗಳನ್ನು ಒದಗಿಸಬೇಕು. ಔದ್ಯೋಗಿಕ ಚಿಕಿತ್ಸೆ (Occupational therapy), ದೈಹಿಕಚಿಕಿತ್ಸೆ (Physiotherapy), ವಾಕ್ ಚಿಕಿತ್ಸೆ (Speech therapy), ಪ್ರಾಥಮಿಕ ಹಂತದಲ್ಲಿಯೇ ಮಧ್ಯವರ್ತಿ ತಂತ್ರ ಬಳಕೆ, (Early intervention), ಮನಶ್ಶಾಸ್ತ್ರೀಯ ಮೌಲ್ಯಮಾಪನ (Psychological assessment) ಹಾಗೂ ಆಪ್ತ ಸಮಾಲೋಚನೆ (Counseling) ಈ ತರಹದ ಸೇವೆಗಳು ಒಳಪಡುತ್ತವೆ. ವಿಶೇಷ ಶಿಕ್ಷಕರು ಒಂದು ತಂಡವಾಗಿ, ಮುಖ್ಯವಾಹಿನಿಯ ಶಿಕ್ಷಕರೊಂದಿಗೆ ಒಟ್ಟುಗೂಡಿ ಮಗುವಿನ ಪ್ರಗತಿಯ ಮೇಲ್ವಿಚಾರಣೆ ನಡೆಸುತ್ತಿರಬೇಕು.

**ಶಿಕ್ಷಕರ ತರಬೇತಿ**

ಪಾಠಮಾಡುವ ಹಾಗೂ ತರಗತಿಯನ್ನು ನಿರ್ವಹಿಸುವ ಶಿಕ್ಷಕರು ಸಮನ್ವಯ ಶಿಕ್ಷಣದ ಪರಿಕಲ್ಪನೆ ಹಾಗೂ ತತ್ತ್ವಗಳೆಡೆಗೆ ಸೂಕ್ಷ್ಮತೆಯನ್ನು ಬೆಳೆಸಿಕೊಳ್ಳುವಂತೆಯೂ, ಅದರತ್ತ ಗಮನಹರಿಸುವಂತೆಯೂ ಮಾಡುವುದು ಅತ್ಯಂತ ಅವಶ್ಯಕ. ಮೂಲಸೌಕರ್ಯಗಳು, ಪಠ್ಯಕ್ರಮವನ್ನು ಸುಲಭವಾಗಿ ಹೊಂದಿಸಿಕೊಳ್ಳುವುದು ಹಾಗೂ ಬೋಧನಾ ಕ್ರಮಗಳಲ್ಲಿ ಮಾಡಿಕೊಳ್ಳಬೇಕಾದ ಹೊಂದಾಣಿಕೆಗಳ ಬಗ್ಗೆ ಶಿಕ್ಷಕರು ತೆರೆದುಕೊಳ್ಳಬೇಕಾಗುತ್ತದೆ. ಸೇವಾ–ಪೂರ್ವ ಹಾಗೂ ಸೇವಾನಿರತ ಶಿಕ್ಷಕರಿಗೆ ಮರುಚೈತನ್ಯ ನೀಡುವಂತಹ ಶಿಕ್ಷಣ ಕಾರ್ಯಕ್ರಮಗಳು ಹಾಗೂ ಅಲ್ಪಾವಧಿ ತರಬೇತಿ ಕಾರ್ಯಕ್ರಮಗಳನ್ನು ಮುಂದುವರೆಸುವುದರಿಂದ ಅವರಿಗೊಂದು ಒಳನೋಟ ಸಿಕ್ಕಂತಾಗಿ ವಿವಿಧ ವೈಕಲ್ಯ ಹೊಂದಿರುವ ಮಕ್ಕಳ ವಿಭಿನ್ನತೆಗೆ ಪ್ರತಿಕ್ರಿಯಿಸಲು ಅವರನ್ನು ಸಿದ್ಧಗೊಳಿಸಿದಂತಾಗುತ್ತದೆ.

**ಸವಾಲುಗಳು**

ಸಮನ್ವಯ ಶಿಕ್ಷಣವನ್ನು ಅನುಷ್ಠಾನಗೊಳಿಸಲು ಇರುವ ಪ್ರಮುಖ ಸವಾಲುಗಳನ್ನು ಜಾಗತಿಕ ಅಧ್ಯಯನಗಳು ಪ್ರಕಟಿಸಿವೆ. ಕೆಳಗೆ ಕೊಟ್ಟಿರುವ ರೇಖಾಚಿತ್ರ ಅವನ್ನು ನಿರೂಪಿಸುತ್ತದೆ. ಮಾರ್ಪಡಿಸಿದ ಕಲಿಕಾ ಸಾಮಗ್ರಿಗಳ ಕೊರತೆ ಹಾಗೂ ಅನುದಾನದ ಅಭಾವ ಸಮಗ್ರ ವಿಧಾನದ ಬಗ್ಗೆ ಸೀಮಿತ ಮೆಚ್ಚುಗೆ ಹಾಗೂ ತಿಳುವಳಿಕೆ ಸುಲಭವಾಗಿ ನಿರ್ವಹಿಸಲಾಗದ ಮೂಲಸೌಕರ್ಯ ವಿಶೇಷ ತರಬೇತುದಾರರ ಹಾಗೂ ತರಬೇತಿ ಕಾರ್ಯಕ್ರಮಗಳ ಕೊರತೆ ವರ್ತನಾ ಅಡೆತಡೆಗಳು

- **ವರ್ತನಾ ಅಡೆತಡೆಗಳು**
- **ವಿಶೇಷ ತರಬೇತುದಾರರ ಹಾಗೂ ತರಬೇತಿ ಕಾರ್ಯಕ್ರಮಗಳ ಕೊರತೆ**
- **ಸುಲಭವಾಗಿ ನಿರ್ವಹಿಸಲಾಗದ ಮೂಲ ಸೌಕರ್ಯ**
- **ಸಮಗ್ರ ವಿಧಾನದ ಬಗ್ಗೆ ಸೀಮಿತ ಮೆಚ್ಚುಗೆ ಹಾಗೂ ತಿಳುವಳಿಕೆ**
- **ಮಾರ್ಪಡಿಸಿದ ಕಲಿಕಾ ಸಾಮಗ್ರಿಗಳ ಕೊರತೆ ಹಾಗೂ ಅನುದಾನದ ಅಭಾವ**

**ಸಮನ್ವಯ ಏಕೆ ಅವಶ್ಯಕ?**

ಸಮನ್ವಯದ ಅನೇಕ ಪ್ರಯೋಜನಗಳನ್ನು ಸಂಶೋಧನೆಯು ಸೂಚಿಸುತ್ತದೆ.

- ವಿದ್ಯಾರ್ಥಿಗಳು ಪರಸ್ಪರರ ವಿಶಿಷ್ಟವಾದ ಶಕ್ತಿಗಳನ್ನು ಹಾಗೂ ಸಾಮರ್ಥ್ಯಗಳನ್ನು ಮೆಚ್ಚಲು ಕಲಿಯುತ್ತಾರೆ.
- ಪರಸ್ಪರ ಸಹಾಯ ಮಾಡುವಂತೆ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿದಂತಾಗುತ್ತದೆ.
- ಹೆಚ್ಚುವರಿ ಅಗತ್ಯವಿರುವ ವಿದ್ಯಾರ್ಥಿಗಳು ನೈಸರ್ಗಿಕ ರೀತಿಯಲ್ಲಿ ಹಾಗೂ ನೈಸರ್ಗಿಕ ಪರಿಸರದಲ್ಲಿ ಸ್ನೇಹವನ್ನು ಬೆಳೆಸಿಕೊಳ್ಳುತ್ತಾರೆ.
- ವೈಕಲ್ಯ ಹೊಂದಿರುವ ಜನರೆಡೆಗೆ ಸಕಾರಾತ್ಮಕ ಭಾವನೆಗಳನ್ನು ಬೆಳೆಸಿಕೊಳ್ಳಲು ವೈಕಲ್ಯ ಇಲ್ಲದೇ ಇರುವ ವಿದ್ಯಾರ್ಥಿಗಳಿಗೆ ಒಂದು ಅವಕಾಶ ಸಿಗುತ್ತದೆ.
- ಸಮುದಾಯದೊಡನೆ ಅವಿನಾಭಾವ ಸಂಬಂಧ ಹೊಂದಿದ್ದೇವೆ ಎಂಬುವುದು ವಿಶೇಷ ಅಗತ್ಯ ಬೇಕಾದ ವಿದ್ಯಾರ್ಥಿಗಳಲ್ಲಿ ಒಂದು ಬಗೆಯ ಆತ್ಮಗೌರವವನ್ನು ಹಾಗೂ ಏನನ್ನೋ ಸಾಧಿಸಿದ್ದೇವೆ ಎಂಬ ಭಾವನೆಯನ್ನು ಹೊಂದುವಲ್ಲಿ ಸಹಾಯ ಮಾಡುತ್ತದೆ.
- ಸಾಮಾನ್ಯವಾಗಿ ವಿದ್ಯಾರ್ಥಿಗಳು ಕಲಿಯಲೇಬೇಕು ಎಂದು ಅಪೇಕ್ಷಿಸುವ ಸಾಮಾಜಿಕ ವರ್ತನೆಗಳನ್ನು ಪರಸ್ಪರರಿಂದ ಬಹಳ ಉತ್ತಮವಾಗಿ ಕಲಿಯುತ್ತಾರೆ.
- ಮಕ್ಕಳು ತಮ್ಮ ಬೆಳವಣಿಗೆಯ ಸಾಮರ್ಥ್ಯದ ಮಟ್ಟವನ್ನು ತಲುಪಿ ಎಲ್ಲ ಪರಿಸರದಲ್ಲೂ ಹೊಂದಿಕೊಳ್ಳಲು ಕಲಿಯುತ್ತಾರೆ.

**ಅಮರ ಜ್ಯೋತಿಯಲ್ಲಿ ವಿಶೇಷ–ಅಗತ್ಯ ಶಿಕ್ಷಣದ ಉತ್ತೇಜನ**

ಪುನರ್ವಸತಿಯ ಬಗೆಗೆ ಸಮಗ್ರ ವಿಧಾನ ಹೊಂದಿರುವ ದೆಹಲಿಯ ಅಮರ್ ಜ್ಯೋತಿ ಚಾರಿಟೇಬಲ್ ಟ್ರಸ್ಟ್ (ಎಜೆಸಿಟಿ), 1981ರಲ್ಲಿ ಸಂಯೋಜಿತ ಹಾಗೂ ಸಮನ್ವಯ ಶಿಕ್ಷಣವನ್ನು ಪ್ರಾರಂಭಿಸಿದ ಭಾರತದಲ್ಲಿನ ಸಂಸ್ಥೆಗಳಲ್ಲಿ ಅಗ್ರಸ್ಥಾನದಲ್ಲಿದೆ. ಒಂದು ಮರದ ಕೆಳಗೆ ಆರಂಭವಾದ ಈ ಶಾಲೆಯಲ್ಲಿ ಮಕ್ಕಳ ಸಮಗ್ರ ಅಭಿವೃದ್ಧಿಗಾಗಿ ಬಹುಶಿಸ್ತಿನ ವಿಧಾನಗಳನ್ನು ಅಳವಡಿಸಿಕೊಳ್ಳಲಾಗಿದೆ. ಒಂದು ತರಗತಿಯಲ್ಲಿ ಮೂವತ್ತು ಮಕ್ಕಳಿದ್ದು ಅದರಲ್ಲಿ ಹದಿನೈದು ಮಕ್ಕಳು ವಿಶೇಷ ಅಗತ್ಯವುಳ್ಳ ಮಕ್ಕಳು.

ಇಂದು ಶಾಲೆಯು ಪರಿಷ್ಕೃತ ಎನ್‌ಸಿಇಆರ್‌ಟಿ ಪಠ್ಯ–ಕ್ರಮವನ್ನು ಅನುಸರಿಸುತ್ತದೆ ಹಾಗೂ ಶಿಕ್ಷಣ ನಿರ್ದೇಶನಾಲಯದ ಮಾನ್ಯತೆಯನ್ನು ಪಡೆದಿದೆ. ಪ್ರಸ್ತುತ 510 ವಿದ್ಯಾರ್ಥಿಗಳಿದ್ದು ಅದರಲ್ಲಿ ವೈಕಲ್ಯ ಇರುವ ಹಾಗೂ ಇಲ್ಲದಿರುವವರು ಬಹುತೇಕ ಸಮಾನ ಸಂಖ್ಯೆಯಲ್ಲಿದ್ದಾರೆ. ಇತ್ತೀಚೆಗೆ, ಒಂದು ಹೊಸ ತರಗತಿಯನ್ನು ಆರಂಭಿಸಲಾಗಿದ್ದು, ಅದರಲ್ಲಿ ಅಂಧ ಮತ್ತು ಶ್ರವಣದೋಷವುಳ್ಳ ಹದಿನಾರು ಮಕ್ಕಳನ್ನು

**ಅಮರ ಜ್ಯೋತಿಯಲ್ಲಿ ವಿಶೇಷ–ಅಗತ್ಯ ಶಿಕ್ಷಣದ ಉತ್ತೇಜನ**

ಪುನರ್ವಸತಿಯ ಬಗೆಗೆ ಸಮಗ್ರ ವಿಧಾನ ಹೊಂದಿರುವ ದೆಹಲಿಯ ಅಮರ್ ಜ್ಯೋತಿ ಚಾರಿಟೇಬಲ್ ಟ್ರಸ್ಟ್ (ಎಜೆಸಿಟಿ), 1981ರಲ್ಲಿ ಸಂಯೋಜಿತ ಹಾಗೂ ಸಮನ್ವಯ ಶಿಕ್ಷಣವನ್ನು ಪ್ರಾರಂಭಿಸಿದ ಭಾರತದಲ್ಲಿನ ಸಂಸ್ಥೆಗಳಲ್ಲಿ ಅಗ್ರಸ್ಥಾನದಲ್ಲಿದೆ. ಒಂದು ಮರದ ಕೆಳಗೆ ಆರಂಭವಾದ ಈ ಶಾಲೆಯಲ್ಲಿ ಮಕ್ಕಳ ಸಮಗ್ರ ಅಭಿವೃದ್ಧಿಗಾಗಿ ಬಹುಶಿಸ್ತಿನ ವಿಧಾನಗಳನ್ನು ಅಳವಡಿಸಿಕೊಳ್ಳಲಾಗಿದೆ. ಒಂದು ತರಗತಿಯಲ್ಲಿ ಮೂವತ್ತು ಮಕ್ಕಳಿದ್ದು ಅದರಲ್ಲಿ ಹದಿನೈದು ಮಕ್ಕಳು ವಿಶೇಷ ಅಗತ್ಯವುಳ್ಳ ಮಕ್ಕಳು.

ಇಂದು ಶಾಲೆಯು ಪರಿಷ್ಕೃತ ಎನ್‌ಸಿಇಆರ್‌ಟಿ ಪಠ್ಯಕ್ರಮವನ್ನು ಅನುಸರಿಸುತ್ತದೆ ಹಾಗೂ ಶಿಕ್ಷಣ ನಿರ್ದೇಶನಾಲಯದ ಮಾನ್ಯತೆಯನ್ನು ಪಡೆದಿದೆ. ಪ್ರಸ್ತುತ 510 ವಿದ್ಯಾರ್ಥಿಗಳಿದ್ದು ಅದರಲ್ಲಿ ವೈಕಲ್ಯ ಇರುವ ಹಾಗೂ ಇಲ್ಲದಿರುವವರು ಬಹುತೇಕ ಸಮಾನ ಸಂಖ್ಯೆಯಲ್ಲಿದ್ದಾರೆ. ಇತ್ತೀಚೆಗೆ, ಒಂದು ಹೊಸ ತರಗತಿಯನ್ನು ಆರಂಭಿಸಲಾಗಿದ್ದು, ಅದರಲ್ಲಿ ಅಂಧ ಮತ್ತು ಶ್ರವಣದೋಷವುಳ್ಳ ಹದಿನಾರು ಮಕ್ಕಳನ್ನು ಸೇರಿಸಿಕೊಳ್ಳಲಾಗಿದ್ದು, ಅವರು ಗೃಹಾಧಾರಿತ (Home-based) ಹಾಗೂ ಕೇಂದ್ರ ಆಧಾರಿತ ತರಬೇತಿ (Centre-based training)ಯನ್ನು ಪಡೆಯುತ್ತಿದ್ದಾರೆ. ಶಿಶುವಿಹಾರ–ದಿಂದಲೇ ಆರಂಭವಾಗುವ ಶೈಕ್ಷಣಿಕ ಒಳಗೊಳ್ಳುವಿಕೆಯು ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಒಳಗೊಳ್ಳುವಿಕೆಯ ಭಾವವನ್ನು ಪೋಷಿಸುವುದಕ್ಕೆ ಸಹಾಯ ಮಾಡುತ್ತದೆ. ಈ ಟ್ರಸ್ಟ್ ಗ್ವಾಲಿಯರ್‌ನಲ್ಲಿಯೂ (ಮಧ್ಯಪ್ರದೇಶ) ಒಂದು ಶಾಖೆಯನ್ನು ಹೊಂದಿದ್ದು, 1989ರಿಂದ ಇದೇ ರೀತಿಯ ಸೇವೆಗಳನ್ನು ಒದಗಿಸುತ್ತಿದೆ.

ಇಲ್ಲಿ ಸಂಯೋಜಿತ ಕ್ರೀಡೆಗಳು ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಂತಹ ವಿವಿಧ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಲು ಮಕ್ಕಳನ್ನು ಪ್ರೋತ್ಸಾಹಿಸಲಾಗುತ್ತದೆ. ಕಂಪ್ಯೂಟರ್ ಅಪ್ಲಿಕೇಷನ್ಸ್, ಸೌಂದರ್ಯ, ಸಂಸ್ಕೃತಿ, ಕಲೆ ಮತ್ತು ಕರಕುಶಲತೆ, ಕಸೂತಿಕಲೆ, ಆಭರಣ ತಯಾರಿಕೆ ಹಾಗೂ ಹೊಲಿಗೆಯಂತಹ ಪೂರ್ವ ವೃತ್ತಿಪರ ತರಬೇತಿಯನ್ನು ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ರೂಪಿಸಲಾಗುವ ಪಠ್ಯಕ್ರಮದ ಪ್ರಮುಖ ಭಾಗವಾಗಿ ಪರಿಗಣಿಸಲಾಗುತ್ತದೆ. 3ನೆಯ ಇಯತ್ತೆಯಿಂದ ಮೇಲ್ಪಟ್ಟು ಎಲ್ಲ ವಿದ್ಯಾರ್ಥಿಗಳು ತಮ್ಮ ಆಸಕ್ತಿಗೆ ಹೊಂದಿಕೆಯಾಗುವಂತಹ ಒಂದು ವೃತ್ತಿಯನ್ನು ಕಡ್ಡಾಯವಾಗಿ ಆರಿಸಿಕೊಳ್ಳಲೇಬೇಕು. ಇದರಲ್ಲಿನ ಕೆಲವು ಕೌಶಲ ಯೋಜನೆಗಳು ರಾಷ್ಟ್ರೀಯ ಮುಕ್ತ ಶಿಕ್ಷಣ ಸಂಸ್ಥೆ (National Institute of Open Schooling) ಹಾಗೂ ರಾಜ್ಯ ವೃತ್ತಿಪರ ತರಬೇತಿ ಮಂಡಳಿಯ (State Councilfor Vocational Training) ಮಾನ್ಯತೆಯನ್ನು ಪಡೆದಿವೆ. ಕ್ರೀಡೆಗಳು ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಒಳಗೊಳ್ಳುವಿಕೆ

ಮಕ್ಕಳು ಓದಲು ಹಾಗೂ ಬರೆಯಲು ಕಲಿಯುವುದಕ್ಕೂ ಮುಂಚೆ ಆಟವಾಡುತ್ತಾರೆ. ಮಗುವಿನ ಬೌದ್ಧಿಕ, ಸಾಮಾಜಿಕ, ದೈಹಿಕ ಹಾಗೂ ಮಾನಸಿಕ ಬೆಳವಣಿಗೆಗೆ ಸಹಾಯ–ವಾಗುವಂತೆ ಬಾಸ್ಕೆಟ್‌ಬಾಲ್, ಟೇಬಲ್ ಟೆನ್ನಿಸ್ ಮುಂತಾದ ಕ್ರೀಡೆಗಳು ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ಉತ್ತೇಜಿಸಲಾಗುತ್ತದೆ. ಮಕ್ಕಳು ತಮ್ಮ ಸಾಮರ್ಥ್ಯವನ್ನು ಬೆಳೆಸಿಕೊಳ್ಳುತ್ತ ವಿವಿಧ ಪರಿಸರಗಳಿಗೆ ಹೊಂದಿಕೊಳ್ಳುತ್ತಾರೆ. ಅಮರ್ ಜ್ಯೋತಿಯ ವಿದ್ಯಾರ್ಥಿಗಳು ಹಲವಾರು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಪಂದ್ಯಗಳಲ್ಲಿ ಭಾಗವಹಿಸುತ್ತಾರೆ.





**ಹೆಚ್ಚುವರಿ ಶೈಕ್ಷಣಿಕ ಪೂರಕ ಸೇವೆಗಳು**

ಆಂಗ್ಲ ಪ್ರಯೋಗಾಲಯದಲ್ಲಿ ಮಕ್ಕಳನ್ನು ಸಂವಹನ ಕೌಶಲ, ಚರ್ಚಾಸ್ಪರ್ಧೆ ಹಾಗೂ ಭಾಷಣಕಲೆಗಳಲ್ಲಿ ತರಬೇತು-ಗೊಳಿಸಲಾಗುತ್ತದೆ ಹಾಗೂ ವಿಜ್ಞಾನ ಪ್ರಯೋಗಾಲಯವು ಪರಿಕಲ್ಪನೆಗಳ ಪ್ರಾಯೋಗಿಕ ಕಲಿಕೆಗೆ ಅನುಕೂಲ ಒದಗಿಸುತ್ತದೆ. ಹಾಗೆಯೇ, ಕಂಪ್ಯೂಟರ್ ಪ್ರಯೋಗಾಲಯ ಹಾಗೂ ಸ್ಮಾರ್ಟ್ ತರಗತಿಗಳು (Smart class) ಕಲಿಕೆಯನ್ನು ಉತ್ತಮಗೊಳಿಸುತ್ತವೆ. ಅಮರ್ ಜ್ಯೋತಿಯು 3, 5, 8, 10 ಹಾಗೂ 12 ಇಯತ್ತೆಗಳಿಗೆ ರಾಷ್ಟ್ರೀಯ ಮುಕ್ತ ಶಿಕ್ಷಣ ಸಂಸ್ಥೆಯಿಂದ ಮಾನ್ಯತೆ ಪಡೆದಿರುವ ಕೇಂದ್ರವಾಗಿದೆ. ಅನನುಕೂಲ ಪರಿಸ್ಥಿತಿಯಲ್ಲಿರುವ ಹೆಚ್ಚುವರಿ ಸಹಾಯದ ಅಗತ್ಯವಿರುವವರಿಗೂ ಶಿಕ್ಷಣವನ್ನು ಒದಗಿಸಲು ಈ ಸಂಸ್ಥೆಯು ಮಾನ್ಯತೆಯನ್ನು ಪಡೆದಿದೆ.

**ಚಿಕಿತ್ಸಾತ್ಮಕ ಮಧ್ಯವರ್ತೀ ತಂತ್ರಗಳು**

ವೈದ್ಯಕೀಯ ವೃತ್ತಿಯವರು ಹಾಗೂ ಔಷಧಿ, ಶಸ್ತ್ರಚಿಕಿತ್ಸೆ, ಮೂಳೆಚಿಕಿತ್ಸೆ (Orthopaedics), ಇಎನ್‌ಟಿ ಹಾಗೂ ಶಿಶು ವೈದ್ಯಕೀಯದಂತಹ (Paediatrics) ಕ್ಷೇತ್ರಗಳಲ್ಲಿ ತಜ್ಞರಾದವರು ಉಚಿತ ಸಮಾಲೋಚನೆ ಹಾಗೂ ರೋಗವನ್ನು ಪತ್ತೆ ಮಾಡುವ ಸೇವೆಗಳನ್ನು (Diagnostic services) ಒದಗಿಸುತ್ತಾರೆ. ತಡವಾದ ಬೆಳವಣಿಗೆ ಇರುವ ಮಕ್ಕಳಿಗೆ ಔದ್ಯೋಗಿಕ ಚಿಕಿತ್ಸೆ (Occupational therapy), ದೈಹಿಕಚಿಕಿತ್ಸೆ (Physiotherapy), ವಾಕ್ ಶ್ರವಣ ಘಟಕ (Speech and audiological unit) ಹಾಗೂ ಪ್ರಾಥಮಿಕ ಹಂತದ ಮಧ್ಯಸ್ಥಿಕೆ ಘಟಕ (Early intervention unit)ಗಳಂತಹ ಹಲವಾರು ಘಟಕಗಳು ಅವರ ಬೆಳವಣಿಗೆಯಲ್ಲಿ ಬಹಳ ಪ್ರಮುಖವಾದ ಪಾತ್ರವನ್ನು ವಹಿಸುತ್ತವೆ. ಚಿಕಿತ್ಸಕ ಸೇವೆಗಳಲ್ಲದೆ ಚಲನಶೀಲತೆಗೆ ಬೇಕಾದ ಸಹಾಯಗಳನ್ನೂ ಒದಗಿಸಲಾಗುತ್ತದೆ. ಸ್ವಯಂ-ಪ್ರೇರಿತರಾಗಿ ಉಚಿತ ಸೇವೆಗಳನ್ನು ಒದಗಿಸಲು ಮುಂದೆ ಬರುವ ವೈದ್ಯರಿಂದ ದೋಷ ಸರಿಪಡಿಸುವ ಶಸ್ತ್ರಚಿಕಿತ್ಸೆಗಳೂ (Corrective surgeries) ನಡೆಯುತ್ತವೆ.

ಮನೋವೈಜ್ಞಾನಿಕ, ವರ್ತನೆ ಅಥವಾ ಶೈಕ್ಷಣಿಕ ವಿಷಯಗಳಿಗೆ ಸಂಬಂಧಿಸಿದಂತೆ ಮಕ್ಕಳು ಯಾವುದೇ ತೊಂದರೆಗಳನ್ನು ಎದುರಿಸುತ್ತಿದ್ದಲ್ಲಿ, 'ಮಕ್ಕಳ ಮಾರ್ಗದರ್ಶನ ಚಿಕಿತ್ಸಾಲಯ'ಗಳಲ್ಲಿ (Child guidance clinic) ಮೌಲ್ಯ-ಮಾಪನಕ್ಕೆ ಒಳಪಡಿಸಿ, ಅವರಿಗೆ ಆಪ್ತಸಮಾಲೋಚನೆಯನ್ನು ನೀಡಿ ಸೂಕ್ತ ಮಧ್ಯಸ್ಥಿಕೆಗಾಗಿ ತಜ್ಞರ ಬಳಿಗೆ ಕಳುಹಿಸಲಾಗುತ್ತದೆ. ಈ ಘಟಕವು ಹೆಚ್ಚುವರಿ ಅಗತ್ಯವಿರುವ ಮಕ್ಕಳಿಗೆ ಯಾವ ರೀತಿಯ ಶಿಕ್ಷಣದ ವಿಧಾನದಿಂದ ಪ್ರಯೋಜನವಾಗಬಹುದು ಎಂಬುದರ ಕುರಿತು ಪೋಷಕರಿಗೆ ಸಲಹೆಗಳನ್ನು ನೀಡುತ್ತದೆ. ಅಲ್ಲದೇ ಹೆಚ್ಚುವರಿ ಅಗತ್ಯವಿರುವ ಮಕ್ಕಳಪಾಲನೆಯಲ್ಲಿ ಎದುರಾಗುವ ವಿಭಿನ್ನ ಬಗೆಯ ಸಮಸ್ಯೆಗಳ ಕುರಿತು ಚರ್ಚಿಸಲು ಪೋಷಕರ ಬೆಂಬಲ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ.

**ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮಗಳು**

ಸಮನ್ವಯ ಶಿಕ್ಷಣವನ್ನು ಅನುಷ್ಠಾನಗೊಳಿಸಲು ಎದುರಾಗುತ್ತಿರುವ ಒಂದು ಮುಖ್ಯವಾದ ಸವಾಲೆಂದರೆ ತರಬೇತಿ ಹೊಂದಿರುವ ಮಾನವ ಸಂಪನ್ಮೂಲಗಳ ಕೊರತೆ. ಈ ಬೇಡಿಕೆಯನ್ನು ಪೂರೈಸಲು ಅಮರ್ ಜ್ಯೋತಿ ಹಲವಾರು ಮಾನವ ಸಂಪನ್ಮೂಲ ಅಭಿವೃದ್ಧಿ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ದೆಹಲಿ ವಿಶ್ವವಿದ್ಯಾಲಯದೊಂದಿಗೆ ಸಂಯೋಜಿತವಾಗಿರುವ ದೈಹಿಕ ಚಿಕಿತ್ಸೆಯಲ್ಲಿ (Physiotherapy)ಸ್ನಾತಕ ಹಾಗೂ ಪದವಿ ಹಂತದ ಕಾರ್ಯಕ್ರಮಗಳು ದೈಹಿಕ ಚಿಕಿತ್ಸಕರ ಕೌಶಲ ಬೆಳವಣಿಗೆಗೆ ಸಹಕಾರಿಯಾಗಿದೆ. ಭಾರತೀಯ ಪುನರ್ವಸತಿ ಮಂಡಳಿ (Rehabilitation Council of India -RCI)ಯ ಮಾನ್ಯತೆ ಪಡೆದಿರುವ, ಮಾನಸಿಕ ಅಸ್ವಸ್ಥತೆ, ಶ್ರವಣ ಮತ್ತು ದೃಷ್ಟಿ ದೋಷಗಳ ವಿಷಯಗಳಿಗೆ ಸಂಬಂಧಿಸಿ ವಿಶೇಷ ಶಿಕ್ಷಣ ನೀಡುವ ಡಿಪ್ಲೊಮಾ ಕಾರ್ಯಕ್ರಮಗಳುಸಹ ನಡೆಸಲ್ಪಡುತ್ತಿವೆ. ಇದಲ್ಲದೆ, ಮುಖ್ಯವಾಹಿನಿಯ ಶಾಲೆಯ ಶಿಕ್ಷಕರನ್ನು ಸಜ್ಜುಗೊಳಿಸಲು ಹಲವಾರು ಅಲ್ಪಾವಧಿ ತರಬೇತಿ ಕಾರ್ಯಕ್ರಮಗಳನ್ನು ಅಗತ್ಯಕ್ಕೆ ತಕ್ಕಂತೆ ರೂಪಿಸಿ ನಡೆಸಲಾಗುತ್ತಿದೆ.

**ಮುಂದಿನ ದಾರಿ**

ಸಮನ್ವಯದ ಕನಸನ್ನು ನನಸಾಗಿಸುವುದಕ್ಕೆ, ಸಮಾಜದ ವಿವಿಧ ಕ್ಷೇತ್ರಗಳು ಒಂದಕ್ಕೊಂದು ಪೂರಕವಾಗಿದ್ದು ಜವಾಬ್ದಾರಿಗಳನ್ನು ಸಮಾನವಾಗಿ ಹಂಚಿಕೊಳ್ಳುವುದು ಅತ್ಯಗತ್ಯವಾಗಿದೆ. ಸಮನ್ವಯದ ಸಾರ್ವತ್ರೀಕರಣವನ್ನು ಪರಿಣಾಮಕಾರಿಯಾಗಿ ಒಮ್ಮುಖವಾಗಿಸುವುದಕ್ಕೆ ಸಂಪನ್ಮೂಲಗಳನ್ನು ಹಾಗೂ ಪರಿಣತಿಯನ್ನು ಸಜ್ಜುಗೊಳಿಸುವುದೂ ಒಂದು ಮಂತ್ರವಾಗಿದ್ದು (A mantra of convergence) ಈ ನಿಟ್ಟಿನಲ್ಲಿ 2018ರಲ್ಲಿ ಸಮನ್ವಯ

ಶಿಕ್ಷಣದ ಐದನೆಯ ಅಂತಾರಾಷ್ಟ್ರೀಯ ಸಮ್ಮೇಳನವು (International Conference on Inclusive Education) ನವದೆಹಲಿಯಲ್ಲಿ ನಡೆದಿದ್ದು ಈ ಕೆಳಗಿನ ಶಿಫಾರಸ್ಸುಗಳನ್ನು ಮಾಡಿದೆ.

**ರಾಷ್ಟ್ರೀಯ ಶಿಕ್ಷಣ ನೀತಿಗಳು ಸಮನ್ವಯ ಶಿಕ್ಷಣವನ್ನು ಸಾಮಾನ್ಯ ಶಿಕ್ಷಣ ವ್ಯವಸ್ಥೆಯಲ್ಲಿ ಪರಿಣಾಮಕಾರಿಯಾಗಿ ವಿಲೀನಗೊಳಿಸಬೇಕು** :

- ಶಿಕ್ಷಕರ ತರಬೇತಿಗಾಗಿ ಸಂಪನ್ಮೂಲಗಳನ್ನು ನಿಗದಿಪಡಿಸಬೇಕು ಹಾಗೂ ವಿಶೇಷವಾಗಿ ಗ್ರಾಮೀಣ ಪ್ರದೇಶದ ಮತ್ತು ಅಂಚಿನಲ್ಲಿರುವ ಸಮುದಾಯಗಳಿಗೆ ಸಮನ್ವಯ ಶಿಕ್ಷಣವನ್ನು ಪ್ರೋತ್ಸಾಹಿಸಬೇಕು.
- ಮಾದರಿ ಸಮನ್ವಯ ಶಾಲೆಗಳನ್ನು ಆರಂಭಿಸುವುದು.
- ಸಮನ್ವಯ ಶಿಕ್ಷಣದ ಸಾರ್ವತ್ರೀಕರಣವನ್ನು ಖಾತರಿ-ಪಡಿಸಿಕೊಳ್ಳಲು ನಿಗದಿತ ಗಡುವು ಹೊಂದಿದ ಒಂದು ಕಾರ್ಯಯೋಜನೆಯನ್ನು ಸೇರಿಸುವುದು.

ಕಾರ್ಯಗತಗೊಳಿಸುವವರು ಹಾಗೂ ಸಮುದಾಯದವರ ನಡುವೆ ಹೆಚ್ಚಿನ ಅರಿವನ್ನು ಮೂಡಿಸಲು ಬಹು-ವಲಯ ಹಾಗೂ ಅಂತರ-ವಲಯ ಸಂಪರ್ಕಗಳನ್ನು ಖಾತರಿಪಡಿಸುವ ಯೋಜನೆಗಳನ್ನು ಸೇರಿಸುವುದು. ಶಿಕ್ಷಕ ತರಬೇತಿ ಕಾರ್ಯಕ್ರಮಗಳು (ಪ್ರವೀಣ ತರಬೇತುದಾರರಿಗೂ ಸೇರಿದಂತೆ):

- ತರಬೇತಿಯಲ್ಲಿ ಪಾಲ್ಗೊಂಡಿರುವ ಶಿಕ್ಷಕರನ್ನೂ ಮೌಲ್ಯ-ಮಾಪನಕ್ಕೆ ಒಳಪಡಿಸುವಂತೆ ವಿನ್ಯಾಸಗೊಳಿಸಬೇಕು.
- ಸೂಕ್ಷ್ಮ ಕೌಶಲಗಳು, ಸಾಮಾಜಿಕ/ಮಾನಸಿಕ ಕಲಿಕೆಯನ್ನು ಸಮನ್ವಯ ಶಿಕ್ಷಣದಲ್ಲಿ ಅಳವಡಿಸಲು ಬೇಕಾದ ಸಾಮರ್ಥ್ಯ ಹೊಂದಬೇಕು.

**ಶಿಕ್ಷಣ ವ್ಯವಸ್ಥೆಯು:**

- ವಿದ್ಯಾರ್ಥಿಗಳು, ಪೋಷಕಳು, ಶಾಲಾ ವ್ಯವಸ್ಥಾಪಕರು, ಶಿಕ್ಷಕರು ಹಾಗೂ ಸಹಾಯಕ ಸಿಬ್ಬಂದಿಗಳನ್ನು ಶಿಕ್ಷಣ ವ್ಯವಸ್ಥೆಯಲ್ಲಿ ಸಮನ್ವಯದ ಅನಿವಾರ್ಯತೆಯ ಕುರಿತು ಸಂವೇದನಾ-ಶೀಲರನ್ನಾಗಿ ಮಾಡಬೇಕು.
- ಅಗತ್ಯವಿರುವಷ್ಟು ಬೆಂಬಲ ವ್ಯವಸ್ಥೆಗಳು ಇರುವಂತೆ ಖಚಿತಪಡಿಸಬೇಕು.
- ಸಂಚಾರಕ್ಕೆ ಅನುಕೂಲವಾಗುವಂತಹ ಹಾಗೂ ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಬೇಕಾದ ಸೇವೆಗಳನ್ನು ವಿಶೇಷ ಅಗತ್ಯ ಬೇಕಾದ ಕಲಿಕಾರ್ಥಿಗಳಿಗೆ ಒದಗಿಸಬೇಕು.
- ಶಿಕ್ಷಣಶಾಸ್ತ್ರ ಸುಧಾರಣೆಗಳು: ಕಲಿಕಾರ್ಥಿಗಳ ಅಗತ್ಯಕ್ಕೆ ಅನುಗುಣವಾಗಿ ಬದಲಾಯಿಸಲು ಅವಕಾಶವಿರುವ ಪಠ್ಯಕ್ರಮ ಹಾಗೂ ಮೌಲ್ಯಮಾಪನವನ್ನು ಒದಗಿಸಬೇಕು.
- ಉಪ ಶೈಕ್ಷಣಿಕ ಚಟುವಟಿಕೆಗಳಲ್ಲಿಯೂ ಎಲ್ಲ ಕಲಿಕಾರ್ಥಿಗಳು ಭಾಗವಹಿಸುವುದಕ್ಕೆ ಅವಕಾಶ ಒದಗಿಸಬೇಕು.
- ಚಾಲ್ತಿಯಲ್ಲಿರುವ ವಿಜ್ಞಾನ, ವಾಣಿಜ್ಯ ಹಾಗೂ ಮಾನವಿಕ ವಿಭಾಗಗಳೊಡನೆ ಸವಾಲು ಎದುರಿಸುತ್ತಿರುವ ಕಲಿಕಾರ್ಥಿ-ಗಳಿಗಾಗಿ 'ರಚನಾತ್ಮಕ ವಿಭಾಗ' (Creative stream) ಎಂಬಂತಹ ಪರ್ಯಾಯಗಳನ್ನೂ ಪರಿಗಣಿಸಬೇಕು.
- ಪಠ್ಯಕ್ರಮದ ಭಾಗವಾಗಿ ಉಪಬಂಧಗಳು/ಸಾಮರ್ಥ್ಯ ಬೆಳೆಸುವ ಕೌಶಲಗಳು/ ವೃತ್ತಿಪರ ತರಬೇತಿಗಳನ್ನು ಸೇರಿಸಬೇಕು. ರಾಷ್ಟ್ರೀಯ ಮುಕ್ತ ಶಾಲೆಗಳಲ್ಲಿ ಕೌಶಲಗಳು/ವೃತ್ತಿಪರ ತರಬೇತಿಗಳನ್ನು ಹೆಚ್ಚುವರಿ ಆಯ್ಕೆಗಳಾಗಿ ಒದಗಿಸಬೇಕು.
- ಕಲಿಕೆಯ ಸಾರ್ವಕಾಲಿಕ ವಿನ್ಯಾಸವು ರೂಢಿಗತ-ವಾಗುವುದನ್ನು ಖಚಿತಪಡಿಸಿಕೊಳ್ಳುವುದರತ್ತ ಕೆಲಸವಾಗಬೇಕು. ಮಾಹಿತಿ ಹಾಗೂ ಸಂಶೋಧನಾ ವ್ಯವಸ್ಥೆಗಳು :
- ನೀತಿಗಳು ಹಾಗೂ ಅವುಗಳನ್ನು ಕಾರ್ಯಗತಗೊಳಿಸುವುದರ ನಡುವೆ ಇರುವ ಅಂತರವನ್ನು ಪರಿಹರಿಸಲು ಬೇಕಾದ ಸಂಶೋಧನೆಗಳನ್ನು ಕಾರ್ಯರೂಪಕ್ಕೆ ತರಲು ವ್ಯವಸ್ಥೆಗಳನ್ನು ಸ್ಥಾಪಿಸಬೇಕು/ ಬಲಪಡಿಸಬೇಕು.
- ಸಾಕ್ಷ್ಯಾಧಾರಿತ ನೀತಿನಿರೂಪಣೆ/ಪರಿಷ್ಕರಣೆಗಳನ್ನು ತಿಳಿಸಲು ಬೇಕಾದ ಮಾಹಿತಿಗಳ ದತ್ತಾಂಶ ಸಂಗ್ರಹವನ್ನು ಸ್ಥಾಪಿಸಬೇಕು.
- ಎಲ್ಲ ಕಲಿಕಾರ್ಥಿಗಳಲ್ಲಿ ಹೊರಗುಳಿಯುವವರು ಪರಿವರ್ತನೆಗಳು ಹಾಗೂ ಶೈಕ್ಷಣಿಕ ಸಾಧನೆಗಳ ಮಾಹಿತಿಯನ್ನು ಆಗಿಂದಾಗ್ಗೆ ಕಲೆಹಾಕಬೇಕು. ಸಹಭಾಗಿತ್ವವನ್ನು ಬಲಪಡಿಸುವುದು :
- ಸಮನ್ವಯ ಶಿಕ್ಷಣದ ಪರಿಣಾಮಕಾರಿ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳಲು ಶೈಕ್ಷಣಿಕ ಸಂಸ್ಥೆಗಳು, ಸಮುದಾಯಗಳು, ಕುಟುಂಬಗಳು ಹಾಗೂ ಸ್ಥಳೀಯ ಸರ್ಕಾರಗಳ ನಡುವಿನ ಸಹಭಾಗಿತ್ವವನ್ನು ಉತ್ತೇಜಿಸುವುದು.
- ಸಮನ್ವಯ ಶಿಕ್ಷಣವನ್ನು ಉತ್ತೇಜಿಸಲು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಸಂಸ್ಥೆಗಳಂತಹ ವೃತ್ತಿಪರ ಸಂಸ್ಥೆಗಳನ್ನು ರೂಪಿಸುವುದು.
- ಸಮನ್ವಯ ಶಿಕ್ಷಣಕ್ಕಾಗಿ ಸಂಪನ್ಮೂಲಗಳನ್ನು ಒದಗಿಸಲು ಕಾರ್ಪೋರೇಟ್ ವಲಯಗಳನ್ನು ಸೇರಿಸಿಕೊಳ್ಳುವುದು.

ಸಮನ್ವಯ ಶಿಕ್ಷಣದ ನೀತಿ-ರಚನೆ ಹಾಗೂ ಅನುಷ್ಠಾನಕ್ಕಾಗಿ ಅಂತರ್-ವಲಯ ಸಹಭಾಗಿತ್ವವನ್ನು ಖಚಿತಪಡಿಸಿಕೊಳ್ಳಲು ಸೂಕ್ತವಾದ ಕಾರ್ಯತಂತ್ರ ಹಾಗೂ ವಿನ್ಯಾಸಗಳನ್ನು ರೂಪಿಸುವುದು.

**ಉಪಸಂಹಾರ**

ನ್ಯೂನತೆ ಇರುವ ಹಾಗೂ ಇಲ್ಲದಿರುವ ಎಲ್ಲಾ ಮಕ್ಕಳಿಗೆ ಶಿಕ್ಷಣವನ್ನು ಒದಗಿಸುವುದು ಎಲ್ಲರ ಜವಾಬ್ದಾರಿ. ಇತ್ತೀಚಿನ ವರ್ಷಗಳಲ್ಲಿ, ದಾನದಿಂದ ಸಬಲೀಕರಣದತ್ತ ಹಾಗೂ ವೈದ್ಯಕೀಯ ಮಾದರಿಯಿಂದ ಮನೋವೈಜ್ಞಾನಿಕ ಮಾದರಿಯತ್ತ ದೃಷ್ಟಿಕೋನ ಬದಲಾಗಿದೆ. ಸಮನ್ವಯ ಶಿಕ್ಷಣದ ಪಯಣವು ನಿರ್ಲಕ್ಷ್ಯಕ್ಕೆ ಒಳಗಾಗುವುದು, ಅಂಚಿಗೆ ತಳ್ಳಲ್ಪಡುವಿಕೆ ಹಾಗೂ ತಾರತಮ್ಯ ಎದುರಿಸುವಂತಹ ಹಲವು ಸವಾಲುಗಳನ್ನು ಎದುರಿಸಿ ಸಮನ್ವಯ, ಅಡ್ಡಿಗಳರದ ಹಾಗೂ ಹಕ್ಕು ಆಧಾರಿತ ಸಮಾಜದಂತಹ ಹಲವಾರು ಮಹತ್ವದ ಬದಲಾವಣೆಗಳನ್ನು ಹೊಂದಿದೆ. ವೈಕಲ್ಯ ಇರುವ ವಿದ್ಯಾರ್ಥಿಗಳು ವೈಕಲ್ಯ ಇಲ್ಲದೇ ಇರುವ ಅವರ ಗೆಳೆಯರೊಡನೆ ಒಂದೇ ವೇದಿಕೆಯಲ್ಲಿ ನಿಲ್ಲುವಂತೆ ಹಾಗೂ ತಮ್ಮ ಸಂಪೂರ್ಣ ಸಾಮರ್ಥ್ಯವನ್ನು ಸಾಧಿಸುವಂತೆ ಪ್ರೋತ್ಸಾಹಿಸಲು ಬೇಕಾದ ಸಂಪನ್ಮೂಲಗಳು ಹಾಗೂ ಸಂಪರ್ಕ ವ್ಯವಸ್ಥೆಗಳ ಒಮ್ಮುಖವಾಗುವಿಕೆಗೆ ಒತ್ತು ನೀಡುವ ಸಮಗ್ರ ವಿಧಾನವನ್ನು ಅಳವಡಿಸಿಕೊಳ್ಳಲು ಪ್ರಸ್ತುತ ಚರ್ಚೆಯ ಹಂತದಲ್ಲಿರುವ ರಾಷ್ಟ್ರೀಯ ಕರಡು ಶಿಕ್ಷಣ ನೀತಿ, 2019 (The Draft National Education Policy 2019) ಒಂದು ಅವಕಾಶವನ್ನು ಒದಗಿಸುತ್ತದೆ.



**ಡಾ. ಉಮಾ ತುಲಿ** ಅವರು ಅಮರ್ ಜ್ಯೋತಿ ಚಾರಿಟೆಬಲ್ ಟ್ರಸ್ಟ್ (ದೆಹಲಿ ಹಾಗೂ ಗ್ವಾಲಿಯರ್) ಇದರ ಸ್ಥಾಪಕರು ಹಾಗೂ ವ್ಯವಸ್ಥಾಪಕ ಕಾರ್ಯದರ್ಶಿಗಳು.ಶಿಕ್ಷಣ ತಜ್ಞೆ, ಪುನರ್ವಸತಿ ವೃತ್ತಿಪರರು ಹಾಗೂ ಕ್ರೀಡಾಪಟುಗಳಾದ ಇವರು, ಅಂಗವಿಕಲರ ಆಯೋಗದ ಮುಖ್ಯ ಆಯುಕ್ತರಾಗಿ ಭಾರತ ಸರ್ಕಾರದಿಂದ ನೇಮಕಗೊಂಡ ಮೊದಲ ಅಧಿಕಾರೇತರರು. ವಿಶೇಷ ಅಗತ್ಯವುಳ್ಳವರನ್ನು ಮುಖ್ಯವಾಹಿನಿಗೆ ತಂದು ಅವರು ಸಮಾನತೆ ಹಾಗೂ ಘನತೆಯಿಂದ ಬದುಕು ನಡೆಸುವಂತೆ ಮಾಡುವ ಪ್ರಯತ್ನಗಳಲ್ಲಿ ಡಾ.ತುಳಿ ಮುಂಚೂಣಿಯಲ್ಲಿದ್ದಾರೆ. ಇವರಿಗೆ ಡಾಕ್ಟರ್ ಆಫ್ ಲಾ, ಲಂಡನ್‌ನ ರೋಹ್ಯಾಂಪ್ಟನ್ ವಿಶ್ವವಿದ್ಯಾಲಯದಿಂದ ಹೊನರಿಸ್ ಕೌಸಾ, ಪದ್ಮಶ್ರೀ ಮುಂತಾದ ಪ್ರಶಸ್ತಿ ಹಾಗೂ ಗೌರವಗಳು ಲಭಿಸಿವೆ. ಇವರನ್ನು umatuli3@gmail.com ರಲ್ಲಿ ಸಂಪರ್ಕಿಸಬಹುದು.

---

ಅನುವಾದ: **ವಿನಯಾ ವಿಠಲ** । ಪರಿಶೀಲನೆ: **ಚಂದ್ರಶೇಖರ್ ಮಂಡೆಕೋಲು**